ನ್ಯೂಯಾರ್ಕ್‌ನಲ್ಲಿ ನೆಲೆಸಿದ್ದಾಗ, 1983ರಲ್ಲಿ ಬರೆದ 'ಹಲ್ಲಿಯ ಬಾಲ' ಕಥನದ ಹಿನ್ನೆಲೆಯಲ್ಲಿ ಈ ಮಾತನ್ನು ಹೇಳುತ್ತಿದ್ದೇನೆ).

ಆ ಕಾದಂಬರಿಯನ್ನು ನೆನಪಿಸಿದ್ದಕ್ಕೆ ಥ್ಯಾಂಕ್ಸ್. ಅದನ್ನು ನೀವು ಮಾಯಾವಾಸ್ತವದ ಕೃತಿಯಾಗಿಯೂ ಓದಬಹುದು. ಅದರಲ್ಲಿ ಯಾವುದೇ ತಪ್ಪಿಲ್ಲ. ಅದರ ಕುರಿತು ಯೋಚಿಸುವಾಗ ಒಂದು ನೆನಪಾಗುತ್ತದೆ, ಆ ಕಾದಂಬರಿ ಬರೆಯುವಾಗ ಲ್ಯಾಟಿನ್ ಅಮೆರಿಕನ್ ಸಾಹಿತ್ಯದ 'ಬೂಮ್' ಶುರುವಾಗುವುದಕ್ಕಿಂತ ಮುಂಚಿದ್ದ ಬರಹಗಾರರ ಪ್ರಭಾವದಲ್ಲಿದ್ದೆ. ವಿಭಿನ್ನ ಮತ್ತು ವಿರುದ್ಧ ನೋಟಕ್ರಮದಲ್ಲಿ ಬರೆಯುವ ಹುರುಪು ಉತ್ಸಾಹಗಳಲ್ಲಿ ಮಿಂದೇಳುತ್ತಿದ್ದ ದಿನಗಳವು. ಮಾಯಾವಾಸ್ತವ ಎನ್ನುವ ಸಾಹಿತ್ಯ ಪ್ರಕಾರ ಕೇವಲ ಉಷ್ಣ ಪ್ರದೇಶದ ದೇಶಗಳಲ್ಲಿ ಬರೆಯಲಾಗುವ ಪ್ರಕಾರ ಎಂಬುದು ನನ್ನ ನಂಬಿಕೆಯಾಗಿದ್ದರೂ, ಜಗತ್ತಿನ ಪ್ರತಿ ಪ್ರದೇಶವೂ ಅದರದ್ದೇ ಆದ ಮಾಯಾವಾಸ್ತವಗಳನ್ನು ಹೊಂದಿವೆ ಎಂಬುದನ್ನು ನಾನು ಬಲ್ಲೆ.

◆ **ಕನಕರಾಜ್: ಜಾಗತಿಕ ಸಾಹಿತ್ಯದ ಆಧುನಿಕ ಇತಿಹಾಸದಲ್ಲಿ ಲ್ಯಾಟಿನ್ ಅಥವಾ ದಕ್ಷಿಣ ಅಮೆರಿಕದ ಸಾಹಿತ್ಯಕ್ಕೆ ಪ್ರತ್ಯೇಕವಾದ ಸ್ಥಾನವಿದೆ. ನನಗೆ ಗೊತ್ತಿರುವ ಮಟ್ಟಿಗೆ ದಕ್ಷಿಣ ಅಮೆರಿಕದ ಬರಹಗಾರರು 'ಶುದ್ಧ ಸಾಹಿತ್ಯ' ಅಥವಾ 'ಕಲೆಗಾಗಿ ಕಲೆ' ಎಂಬ ನಿಲುವಿಗಿಂತ ಮಾನವ ಹಕ್ಕುಗಳು, ಸ್ವಾತಂತ್ರ್ಯದ ಹಕ್ಕುಗಳು ಎಂಬಂತಹ ಮೂಲಭೂತ ಪ್ರಶ್ನೆಗಳನ್ನು ಆಧಾರವಾಗಿಟ್ಟುಕೊಂಡೇ ಸಾಹಿತ್ಯವನ್ನು ಬರೆಯುತ್ತಾರೆ ಅಥವಾ ಸ್ವೀಕರಿಸುತ್ತಾರೆ. ಈ ನಿಲುವೇ ಜಗತ್ತಿನ ಅನೇಕ ಬರಹಗಾರರಿಗೆ ಸ್ಫೂರ್ತಿಯಾಗಿದೆ. ಈ ನಿಲುವಿನ ಬಗ್ಗೆ ನಿಮ್ಮ ಅಭಿಪ್ರಾಯವೇನು? ಸಾಹಿತ್ಯ, ಅಧಿಕಾರದ ನೆಲೆಗಳ ವಿರುದ್ಧ ನಿಂತು ಮನುಷ್ಯತ್ವಕ್ಕಾಗಿ ಸದಾ ಕೆಲಸ ಮಾಡುತ್ತದೆ ಎನ್ನುವುದನ್ನು ಒಪ್ಪುವಿರಾ?**

ಹೌದು, ಒಪ್ಪುತ್ತೇನೆ. ಸಾಹಿತ್ಯದ ಕುರಿತು ಆಳವಾದ ತಿಳಿವಳಿಕೆ ಮತ್ತು ಎಚ್ಚರಿಕೆ ನನ್ನಲ್ಲಿದೆ. ಆದರೂ ಕೃತಿಯೊಂದು ಹೇಳುವ ಮೇಲ್ಮುಖದ ವಿವರಗಳನ್ನು ನಾನು ಒಪ್ಪುವುದಿಲ್ಲ. ಒಳ್ಳೆಯ ಸಾಹಿತ್ಯ ಕೃತಿಯಲ್ಲಿ ಬರಹಗಾರರ ಸ್ವಂತ ಅಭಿಪ್ರಾಯ–ಸಿದ್ಧಾಂತಗಳ ಹೊರತಾಗಿಯೂ ವಿಸ್ತಾರವಾದ ಅನೇಕ ಸಂಗತಿಗಳನ್ನು ಚರ್ಚಿಸುವ ಅಂಶಗಳು ಇರುತ್ತವೆ. ಬರಹಗಾರನ/ಳ ನಂಬಿಕೆಗಳು ಅವನ/ಳ ಎದೆಯೊಳಗೆ ಗಟ್ಟಿಯಾಗಿದ್ದರೆ, ಮತ್ತು ಅವುಗಳನ್ನು ಓದುಗರ ಮೇಲೆ ಬಲವಂತವಾಗಿ ಹೇರದಿದ್ದರೆ, ಆ ನಂಬಿಕೆಗಳು ಮತ್ತಷ್ಟು ಸೂಕ್ಷ್ಮವಾಗಿಯೂ ವಿಶಿಷ್ಟವಾಗಿಯೂ ಅವರ ಕೃತಿಗಳಲ್ಲಿ ಅಭಿವ್ಯಕ್ತಿಗೊಳ್ಳುತ್ತದೆ.

'ಕಲೆ ಕಲೆಗಾಗಿಯೇ' ಅಥವಾ ಯಾವುದಾದರೂ ಸಿದ್ಧಾಂತಗಳನ್ನು ತಲುಪಿಸುವುದಕ್ಕಾಗಿಯೇ ಎಂಬ ಚರ್ಚೆ ಬೋರ್ಹೆಸ್ ಮತ್ತು ಸಬೊಟಾ ನಡುವೆ ದೀರ್ಘ ಕಾಲದವರೆಗೂ ನಡೆದಿತ್ತು. ಬೋರ್ಹೆಸ್, ಸಾಹಿತ್ಯದಲ್ಲಿ ರಾಜಕೀಯ ಇರಬಾರದು ಎಂಬ ನಿಲುವನ್ನು ನಂಬಿದ್ದವರು. ರಾಜಕೀಯ (ಮತ್ತು ಭಯ) ನನ್ನ ಮೇಲೆ ದಾಳಿ ನಡೆಸುವವರೆಗೂ ನಾನೂ ಹಾಗೇ ನಂಬಿದ್ದೆ. ಬರಹ ಎನ್ನುವುದು ರಾಜಕೀಯ ವಾಸ್ತವಕ್ಕಿಂತ ಅನ್ಯವಾದುದಲ್ಲ ಎನ್ನುವುದನ್ನು ನಾನು ಈಗ ಅರ್ಥ ಮಾಡಿಕೊಂಡಿದ್ದೇನೆ. ನನ್ನ ಅಭಿಪ್ರಾಯದಲ್ಲಿ ಬದಲಾವಣೆ ಆಗಿದೆ. ಇದು ಬೋರ್ಹೆಸ್ ನಿಲುವಿನ ಮೇಲಿದ್ದ ನನ್ನ ನಂಬಿಕೆಗೂ ಅನ್ವಯಿಸುತ್ತದೆ.

◆ **ಪೆರುಂದೇವಿ: ಸ್ತ್ರೀ ಬರಹಗಾರರ ಬರಹಗಳಲ್ಲಿ ಕಾಣುವ ಆಳ ರಾಜಕೀಯ ಪ್ರಜ್ಞೆಯ ಕುರಿತು ಅರ್ಜೆಂಟೈನಾದ ಓದುಗರ ನಡುವೆ ಯಾವ ಬಗೆಯ ಅನಿಸಿಕೆಗಳಿವೆ?**

ಇದು ಒಳ್ಳೆಯ ಪ್ರಶ್ನೆ. ಸ್ತ್ರೀ ಬರಹಗಾರರ ರಾಜಕೀಯ ಪ್ರಜ್ಞೆಯನ್ನು ಅರ್ಜೆಂಟೈನಾದ ಮಾಧ್ಯಮಗಳು ನಿರಾಕರಿಸುತ್ತಲೇ ಬರುತ್ತಿವೆ. ಸ್ತ್ರೀ ಬರಹಗಾರರ ಸಾಹಿತ್ಯಕ ಪ್ರಜ್ಞೆಯನ್ನು ಅರ್ಜೆಂಟೈನಾದ ವಿಮರ್ಶಕರುಗಳು ಬಹುವಾಗಿ ಮೆಚ್ಚಿ ಮಾತನಾಡಿದರೂ ಆ ಬರಹಗಳಲ್ಲಿರುವ ರಾಜಕೀಯ ನಿಲುವು/ಪ್ರಜ್ಞೆಯನ್ನು ಕುರಿತು ಸೊಲ್ಲೆತ್ತುವುದಿಲ್ಲ. ಸ್ತ್ರೀ ಬರಹಗಾರರಾದ ನಾವು ಯಾವುದೇ ಸಂದರ್ಭದ ಎದುರುಬದುರಿನ ನಿಲುವುಗಳನ್ನು ಒಮ್ಮುಖವಾಗಿ ಗ್ರಹಿಸುವುದಿಲ್ಲ, ಬದಲಿಗೆ ಅವೆರಡಕ್ಕೂ ನಡುವಿನ ಭಿನ್ನ ಬಣ್ಣಗಳನ್ನು, ನೆರಳನ್ನು ಚಿತ್ರಿಸುತ್ತೇವೆ ಎಂಬುದು